**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**

**ಕಡೂರು.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.2166/2023**

**ಪಿರ್ಯಾದುದಾರರು :** ಸರ್ಕಾರದ ಪರವಾಗಿ : ಯಗಟಿ ಪೊಲೀಸರು

**-ವಿರುದ್ದ-**

**ಆರೋಪಿ/ತರು :** ಕಾರ್ತಿಕ ಬಿ.ಜೆ.

**ದೋಷಾರೋಪಣೆ**

**ಶ್ರೀಮತಿ ಅಫ್ರಿನ್ ಸುಲ್ತಾನ, ಬಿ.ಎ.ಎಲ್., ಎಲ್.ಎಲ್.ಬಿ.,** 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

ಕಾರ್ತಿಕ ಬಿ.ಜೆ. ಬಿನ್ ಜಯಣ್ಣ,
ವಯಸ್ಸು ಸುಮಾರು 19 ವರ್ಷ,
ಕೂಲಿ ಕೆಲಸ,
ವಾಸಃ ಬಾಸೂರು, ಕಡೂರು ತಾಲ್ಲೂಕು.

**ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ**

ದಿನಾಂಕ 25.03.2023 ರಂದು 10.30 ಗಂಟೆ ಸಮಯದಲ್ಲಿ ಯಗಟಿ ಪೋಲಿಸ್ ಠಾಣಾ ಸರಹದ್ದಿನ ಬಾಸೂರು ಗ್ರಾಮಕ್ಕೆ ಹೋಗುವ ಕೆದಿಗೆರೆ ರಸ್ತೆಯಲ್ಲಿ ಆರೋಪಿತರಾದ ನೀವು ಯಾವುದೇ ಪರವಾನಗಿಯನ್ನು ಹೊಂದದೆ ಅಕ್ರಮವಾಗಿ ಒಂದು ಕಿತ್ತಳೆ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್.ನ 52 ರಾಜವಿಸ್ಕಿ ಎಂಬ ಹೆಸರಿನ ಮದ್ಯದ ಪ್ಯಾಕೇಟುಗಳನ್ನು ಕಾನೂನು ಬಾಹಿರವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಸಲುವಾಗಿ ತೆಗೆದುಕೊಂಡು ಹೋಗುತ್ತಿರುವಾಗ, ಸದರಿ ಮಾಹಿತಿಯು ಚಾಸಾ-1 ಕೃಷ್ಣ, ಪೋಲಿಸ್ ಉಪ ನಿರೀಕ್ಷಕರು, ಯಗಟಿ ಪೋಲಿಸ್ ಠಾಣೆ ಇವರಿಗೆ ಬಂದಿದ್ದು, ಸದರಿ ಮಾಹಿತಿಯ ಮೇರೆಗೆ ಚಾಸಾ.1 ರವರು ತನ್ನ ಇಲಾಖಾ ಸಿಬ್ಬಂದಿ ಹಾಗೂ ಪಂಚರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ನೀವು ಅಕ್ರಮವಾಗಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಮೇಲೆ ಹೇಳಿದ ಮದ್ಯದ ಪ್ಯಾಕೇಟುಗಳನ್ನು ವಶಪಡಿಸಿಕೊಂಡಿರುವ ಕಾರಣ,

ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸದರಿ ಅಪರಾಧವನ್ನು ಮಾಡಿರುವುದರಿಂದ ಈ ಮೇಲಿನ ದೋಷಾರೋಪಣೆಯನ್ನು ಈ ನ್ಯಾಯಾಲಯದಲ್ಲಿ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತಿದ್ದೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿ ಉತ್ತರಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿ ಉತ್ತರಃ ವಿಚಾರಣೆಯಾಗಬೇಕು

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ.

ದಿನಾಂಕಃ 28 ನೇ ದಿವಸ ಫೆಬ್ರವರಿ ಮಾಹೆ 2023 ನೇ ಇಸವಿ.

ಸಹಿ/-

(ಅಫ್ರಿನ್ ಸುಲ್ತಾನ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ.ಗಳು, ಕಡೂರು.